ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟ್ರೇಷನ್ ನಂ. ಕೆಆರ್ಎನ್ಎಸ್ — ೧೯

ಬೆಲೆ ೨೦ ಪೈಸೆ

ಸಂಪುಟ ೧ ಸಂಚಿಕೆ ೪೦ ಸೋಮವಾರ ೨೯-೫-೧೯೮೪ ಕೊಪ್ಪ

ದಿಢೀರ್ ದರ್ಖಾಸ್ತಿಗೆ ಡಿಸಿ ತಡೆಯಾಜ್ಞೆ

ಕೊಪ್ಪ: ಈ ತಾಲ್ಲೂಕಿನ ಹಿರೇಗದ್ದೆ ಗ್ರಾಮದ ೧೩೪ನೇ ಸ.ನಂ.ನಲ್ಲಿ ಮಂಜುನಾಥ ಹೆಗ್ಡೆ ಎಂಬುವರಿಗೆ ರಾತ್ರೋರಾತ್ರಿ ಸರ್ವೆ ಮಾಡಿ ಮಂಜೂರು ಮಾಡಿದ್ದ ಸುಮಾರು ೨೫ ಎಕರೆ ಜಮೀನಿನ ವ್ಯವಹಾರಕ್ಕೆ ಜಿಲ್ಲಾಧಿಕಾರಿಗಳು ತಡೆಯಾಜ್ಞೆ ನೀಡಿದ್ದಾರೆ ಎಂದು ಶಾಸಕ ಗೋವಿಂದಗೌಡರು 'ಮುಂಜಾವು'ಗೆ ತಿಳಿಸಿದ್ದಾರೆ.

ಗ್ರಾಮಸ್ಥರ ಬಹಳ ಕಾಲದ ದರಖಾಸ್ತು ಅರ್ಜಿಗಳನ್ನು ಕಡೆಗಣಿಸಿ ಹೊರಗಿನವರಿಗೆ ತುರ್ತಾಗಿ ಜಮೀನು ನೀಡಿದ್ದರ ವಿರುದ್ಧ ಗ್ರಾಮಸ್ಥರು ನೀಡಿದ್ದ ದೂರಿನ ಮೇರೆಗೆ ಶಾಸಕರು ಸದರಿ ಮಂಜೂರಾತಿಯನ್ನು ರದ್ದುಪಡಿಸುವಂತೆ ಏ. ೧೫ ರಂದು ಸರ್ಕಾರಕ್ಕೆ ಪತ್ರ ಬರೆದಿದ್ದರು.

ಕ್ಷೇತ್ರದಲ್ಲಿ ೧೧೦೦೦ಕ್ಕೂ ಹೆಚ್ಚು ದರ್ಖಾಸ್ತು ಅರ್ಜಿ : ವಿಶೇಷ ಎಸಿ ನೇಮಿಸಲು ಆಗ್ರಹ

(ವರದಿ: ಕೋಣೆಗದ್ದೆ ಪದ್ಮನಾಭ)

ಬಾಳೆಹೊನ್ನೂರು ಪುರ: ಶೃಂಗೇರಿ, ಕೊಪ್ಪ, ನ.ರಾ.ಪುರ ತಾಲ್ಲೂಕುಗಳಲ್ಲಿ ವಿಲೇವಾರಿಯಾಗದೆ ಉಳಿದಿರುವ ದರ್ಖಾಸ್ತು ಅರ್ಜಿಗಳನ್ನು ಕೂಡಲೇ ಇತ್ಯರ್ಥ ಮಾಡಲು ಪ್ರತ್ಯೇಕವಾಗಿ ಒಬ್ಬ ಕಂದಾಯ ಉಪವಿಭಾಗಾಧಿಕಾರಿಯನ್ನು ನೇಮಿಸುವಂತೆ ಶಾಸಕ ಗೋವಿಂದಗೌಡರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ವಿಷಯವನ್ನು ಇಲ್ಲಿ ಮೇ ೨೦ ರಂದು ಸಹ್ಯಾದ್ರಿ ಬಯಲು ರಂಗಮಂದಿರ ಉದ್ಘಾಟನಾ ಸಮಾರಂಭದಲ್ಲಿ ತಿಳಿಸಿದ ಶಾಸಕರು ಈ ಬೇಡಿಕೆ ಒಂದೆರಡು ತಿಂಗಳಲ್ಲಿ ಈಡೇರುವ ನಿರೀಕ್ಷೆ ವ್ಯಕ್ತಪಡಿಸಿದರು.

೧೧೦೦೦ಕ್ಕೂ ಹೆಚ್ಚು

ತಮ್ಮ ಕ್ಷೇತ್ರದ ಮೂರೂ ತಾ||ಗಳಿಂದ ಒಂದು ಸಾವಿರಕ್ಕೂ ಹೆಚ್ಚು ದರ್ಖಾಸ್ತು ಅರ್ಜಿಗಳಿಗೆ ಸಂಬಂಧಪಟ್ಟ ಮನವಿಗಳು ತಮಗೆ ಬಂದಿದ್ದು, ಅದರಲ್ಲಿ ೧೦-೧೨ ವರ್ಷಗಳಿಂದಲೂ ಅಧಿಕಾರಿಗಳು ಗಮನ ನೀಡದ ಹಲವಾರು ಪ್ರಕರಣಗಳೂ ಇವೆ ಎಂದು ಗೌಡರು ಹೇಳಿದರು.

"ರೈತರಿಗೆ, ಜನಸಾಮಾನ್ಯರಿಗೆ ಅಧಿಕಾರಿಗಳಿಂದ ತೊಂದರೆ ಆಗುತ್ತಿರುವುದನ್ನು ನಾನು ಮುಂದೆ ಸಹಿಸುವುದಿಲ್ಲ. ಹಳೆಯ ಪ್ರವೃತ್ತಿಯನ್ನು ಬದಲಿಸಿ, ಜನರೊಂದಿಗೆ ಸೇರಿ ಕೆಲಸ ಮಾಡಿ" ಎಂದು ಅಧಿಕಾರಿಗಳಿಗೆ ಕರೆ ನೀಡಿದ ಶಾಸಕರು, "ಯಾವುದೇ ಸಂದರ್ಭದಲ್ಲಿ ಇಂಥ ತೊಂದರೆಗಳನ್ನು ನೇರವಾಗಿ ನನ್ನ ಗಮನಕ್ಕೆ ತನ್ನಿ. ಅಗತ್ಯ ಕೆಲಸಕ್ಕೆ ಆದ್ಯ ಗಮನ ಕೊಟ್ಟು ಕೆಲಸ ಪೂರೈಸಿಕೊಳ್ಳಿ" ಎಂದು ಜನರಿಗೆ ವಿನಂತಿಸಿದರು.

ತಾ.ಅ.ಮಂ. ಅಧ್ಯಕ್ಷ ಬಿ.ಜಿ. ಚಿದಂಬರ್ ಅಧ್ಯಕ್ಷತೆ ವಹಿಸಿದ್ದು, ವಿಭಾಗ ಅರಣ್ಯಾಧಿಕಾರಿ ಕೆ.ಸುಂದರನಾಯಕ್ ಜ್ಯೋತಿ ಮಹಿಳಾ ಸಮಾಜದ ಆಶ್ರಯದ ಅಂಗನವಾಡಿಯನ್ನು ಉದ್ಘಾಟಿಸಿದರು. ಪಂಚಾಯ್ತಿಯ ಮಾಜಿ ಅಧ್ಯಕ್ಷ ಕೆ. ಎಸ್. ಪದ್ಮನಾಭ ಮುಖ್ಯ ಅತಿಥಿಗಳಾಗಿದ್ದರು. ಪಂ. ಅಧ್ಯಕ್ಷ ಮಂಜಪ್ಪ ಶೆಟ್ಟಿ ಸ್ವಾಗತಿಸಿ, ಮಹಿಳಾ ಮಂಡಲದ ಅಧ್ಯಕ್ಷೆ ಶ್ರೀಮತಿ [illegible] ವಂದಿಸಿದರು.

ಹುಲಿಗಳ ಪ್ರತಾಪ: ಮನೆ ಮಗ್ಗುಲ ಕೊಟ್ಟಿಗೆಯಲ್ಲೇ ಫಲಾರ!

ಕಿಗ್ಗ: ಇಲ್ಲಿಗೆ ಸಮೀಪದ ಕಿತ್ತಲೆಮನೆ-ಸಿರಿಮನೆ-ಕಾರ್ಕೆ ಕಾಡಿನ ಸೆರಗಿನಲ್ಲಿ ಹುಲಿಗಳು ಮನೆಯ ಒತ್ತಿಗಿರುವ ದನದ ಕೊಟ್ಟಿಗೆಗೇ ನುಗ್ಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ.

ಈಚೆಗಷ್ಟೇ ಬೆನ್ನಮ್ಮರ್ಲಕೊಡಿಗೆ ಕೃಷ್ಣಯ್ಯ ಅವರ ಕೊಟ್ಟಿಗೆಯಿಂದ ಎತ್ತಿನಗಬ್ಬವೊಂದನ್ನು ಹುಲಿ ಎಳೆದು ತಿಂದಿದ್ದ ಸುದ್ದಿ ಹಳೆಯದಾಗುವ ಮೊದಲೇ ಇಂಥದೇ ಸುದ್ದಿಗಳು ಕಾರ್ಕೆಯಿಂದ ಬಂದಿವೆ.

ಮರಳಿ ಯತ್ನ!

ಶೃಂಗೇರಿ ತಾ.ಅ. ಮಂಡಳಿಯ ಗಿರಿಜನ ಸದಸ್ಯ ಕಾರ್ಕೆ ಶೇಷಯ್ಯಗೌಡ ಅವರ ದನದ ಕೊಟ್ಟಿಗೆಗೆ ಮೇ ೧೫ರ ರಾತ್ರಿ ಹುಲಿ ನುಗ್ಗಿ ದನಕ್ಕೆ ಕೈಕೊಟ್ಟಿತು. ಆದರೆ ಚಾಪೆ ಹೆಣೆಯುತ್ತ ಎಚ್ಚರವಾಗಿದ್ದ ಮನೆಯವರು ಗಲಾಟೆ ಮಾಡಿ ಅದನ್ನು ಓಡಿಸಿದರು. ಪಟ್ಟು ಬಿಡದ ಹುಲಿ ಮರುದಿನ ರಾತ್ರಿ ಸಮೀಪದ ರಾಮಯ್ಯ ಹೆಗ್ಡೆಯವರ ಕೊಟ್ಟಿಗೆಗೆ ನುಗ್ಗಿ ಅಲ್ಲೇ ಕೂತು ಎರಡು ಕರುಗಳನ್ನು ತಿಂದುದು ಮನೆಯವರಿಗೆ ಬೆಳಗಾದ ಮೇಲೇ ಗೊತ್ತಾದದ್ದು!

ದನ ಮೇಯುತ್ತಿರುವಾಗಲೇ

ಅದಾಗಿ ಒಂದೆರಡು ದಿನದಲ್ಲಿ ಚಿಕ್ಕಮನೆಯ ಬಳಿ ಬ್ಬಿಟ್ಟ [illegible] ಮತ್ತು ಬ್ಬಿಟ್ಟ ಶಾಲೆಯ ಹುಡುಗ ದನಗಳನ್ನು ಮೇಯಿಸುತ್ತಿದ್ದಾಗ ಹುಲಿಯೊಂದು ಒಂದು ಕರುವನ್ನು ಹಿಡಿದು ಉತ್ತಿನಲ್ಲಿ ಕೆಡವಿಕೊಂಡಿತ್ತು. ಅವರಿಬ್ಬರೂ ಜೋರಾಗಿ ಕಲ್ಲು ಹೊಡೆದು ಅದನ್ನು ಓಡಿಸಿದರು. ಕರುವಿನ ಕುತ್ತಿಗೆಯು ನಾಳ ಒಂದು ಚೂರು ಮಾತ್ರ ಉಳಿದುಕೊಂಡಿದ್ದು, ಈ ವರದಿ ಪ್ರಕಟವಾಗುವ ಹೊತ್ತಿಗೆ ಕರು ಸತ್ತಿರಬಹುದು.

ಕಿತ್ತಲೆಮನೆಯಲ್ಲಿ ೩ ಜಾನುವಾರುಗಳು ಸುಮಾರು ೧೫ ದಿನದಿಂದ ಕಾಣೆಯಾಗಿವೆ ಎನ್ನಲಾಗಿದೆ.

ಮೇಲ್ಕಂಡ ಕಾಡಿನ ಸೆರಗಿನಲ್ಲಿ ಹಲವು ಹುಲಿಗಳು ಸಂಚರಿಸುತ್ತಿದ್ದು, ದಿನವೂ ಊರಿನ ಒಂದೆರಡು ಮೈಲಿಯೊಳಗೆ ಕೂಗುತ್ತಿರುತ್ತವೆ.

ತನಿಖೆಗೆ ಒತ್ತಾಯ

ಕೊಪ್ಪ: ಶೃಂಗೇರಿ, ಕೊಪ್ಪ, ನ. ರಾ. ಪುರ ತಾಲ್ಲೂಕುಗಳಲ್ಲಿ [illegible] ಗ್ರಾಮೀಣ ಉದ್ಯೋಗ ಯೋಜನೆ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ [illegible] ನಿರ್ಮಾಣವಾಗುವ [illegible] ಮತ್ತು [illegible]ಗಳಿಗಾಗಿ ಹಂಚುಗಳನ್ನು ಒದಗಿಸಲು [illegible] 'ಮಲೆನಾಡು [illegible]' ಸಂಸ್ಥೆಯ ಟೆಂಡರನ್ನು ಜಿಲ್ಲಾ ಅಭಿವೃದ್ಧಿ ಸಹಾಯಕರು ಅನುಮೋದಿಸಿದ್ದು, ಈ ಸಂಸ್ಥೆಯ ಹಂಚುಗಳು ಬಹಳ ಕಳಪೆ ದರ್ಜೆಯವೆಂದು ಹೇಳಲಾಗಿದೆ.

ಇಲ್ಲಿನ ತಾ.ಅ. ಮಂಡಳಿ ಸದಸ್ಯರೊಬ್ಬರು [illegible]ಗಾಗಿ ಕೆಲವು ಹಂಚುಗಳನ್ನು [illegible] ಹಾಕಿದ್ದಾಗ ಅವು [illegible] ದೂ೬೦೦ ಗ್ರಾಂ [illegible] ದ್ದನ್ನು ತಾ. ಅ. ಮಂಡಳಿ ಶಾಸಕರಿಗೆ ವರದಿ ಮಾಡಿದೆ.

ಈ ಸಂಸ್ಥೆಯ ಟೆಂಡರನ್ನು ಒಪ್ಪಿರುವಲ್ಲಿ ಆಳವಾದ ಭ್ರಷ್ಟಾಚಾರದ [illegible] ವಿರಬಹುದೆಂದು ಶಂಕಿಸಿರುವ ಶಾಸಕರು ಕೂಡಲೇ ಈ ಟೆಂಡರು ವ್ಯವಹಾರವನ್ನು ಸಿಬಿಐ ತನಿಖೆಗೆ [illegible] ಒತ್ತಾಯಿಸಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆಂದು ತಿಳಿದು ಬಂದಿದೆ.

ಬಂಡಿಗಡಿ ಸೇವಾ ಸಹಕಾರ ಸಂಘದಲ್ಲಿ ಹಣ ದುರುಪಯೋಗ: ಇಲಾಖೆ ಸ್ಪಷ್ಟೀಕರಣ

ಕೊಪ್ಪ: ಬಂಡಿಗಡಿ [illegible] ಸಂಘದಲ್ಲಿ [illegible] ಪತ್ರಿಕಾ ವರದಿಗಳಿಗೆ [illegible] ಸಹಕಾರ ಸಂಘಗಳ [illegible] ದಿನಾಂಕ [illegible] ನೀಡಿರುವ ಸ್ಪಷ್ಟೀಕರಣದ [illegible] ಇಲ್ಲಿ ಕೊಡಲಾಗಿದೆ. [ಈ ಬಗ್ಗೆ 'ಮುಂಜಾವು' [illegible] ಸ್ವಾಗತಿಸುತ್ತದೆ.]

ಸ್ಪಷ್ಟೀಕರಣ: [illegible]

[illegible]

ಮಳೆ ಅಭಾವದಿಂದ ಬೆಳೆಗಳಿಗೆ ತೀವ್ರ ಹಾನಿ : ೫ ವರ್ಷ ವಸೂಲಿ ಕೈಬಿಡಲು ಆಗ್ರಹ

ಕೊಪ್ಪ: ಮಳೆಯ ತೀವ್ರ ಅಭಾವದಿಂದ ಬೆಳೆ ಹಾಗೂ ತೋಟಗಳಿಗೆ ಬಹಳ ಹಾನಿಯಾಗಿರುವುದರಿಂದ ೫ ವರ್ಷ ಕಾಲ ಕಂದಾಯ, ನೀರಿನ ತೆರಿಗೆ, ಲೆವಿ ಹಾಗೂ ಸಾಲ ವಸೂಲಾತಿಯನ್ನು ಕೈಬಿಡಬೇಕೆಂದು ರೈತಸಂಘ ಸರ್ಕಾರವನ್ನು ಒತ್ತಾಯಿಸಿದೆ.

ಈ ಬಗ್ಗೆ ಮೇ. ೫ರಂದು ನಡೆದ ರೈತ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಲ್ಲಿ, "೬ ತಿಂಗಳಿಂದ ಮಳೆಯೇ ಇಲ್ಲದೆ ಪ್ರಮುಖ ಬೆಳೆಗಳಾದ ಅಡಿಕೆ, ಏಲಕ್ಕಿ, ಮೆಣಸು ಹಾಗೂ ಇನ್ನಿತರ ಬೆಳೆ ಭತ್ತ ಎಲ್ಲವೂ ಸುಟ್ಟುಹೋಗಿದ್ದು, ಅಡಿಕೆ ತೋಟಗಳಿಗೆ ತೀವ್ರ ಹಾನಿಯಾಗಿದೆ. [illegible] ಅಡಿಕೆ ಬೆಳೆಯು ನಾಶವಾಗಿದೆ" ಎಂದು [illegible]ಸಲಾಗಿದೆ.

ಅಧಿಕಾರಿಗಳ ಹಾಜರಿ ಬಗ್ಗೆ

ತಾಲ್ಲೂಕಿನ ಎಲ್ಲಾ ಅಧಿಕಾರಿಗಳು ಬುಧವಾರ ತಮ್ಮ ಕಚೇರಿಯಲ್ಲಿ ಹಾಜರಿದ್ದು ರೈತರ ಕೆಲಸಗಳನ್ನು ಮಾಡಿಕೊಡುವಂತೆ ಸುತ್ತೋಲೆ ಕಳಿಸಬೇಕೆಂದೂ, ಆ ದಿನ ತಾ|| ಸಮಿತಿ ಪದಾಧಿಕಾರಿಗಳು ಭೇಟಿ ಕೊಟ್ಟು ರೈತರಿಗೆ ಸಹಾಯ ನೀಡಬೇಕೆಂದೂ [illegible] ಯಲ್ಲಿ [illegible] ನಿರ್ಧರಿಸಲಾಯಿತು. [illegible] ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಸಮಿತಿ ರಚನೆ ಮತ್ತು [illegible] ಬಗ್ಗೆ ಸಹ ನಿರ್ಧರಿಸಲಾಯಿತು.

ಓದುಗರ ಪತ್ರ

ಉತ್ತಮ ಮಾರ್ಗದರ್ಶನ

ಮಾನ್ಯರೇ,

ತಾವು ತಮ್ಮ ೨೨-೫-೮೩ರ ಸಂಚಿಕೆಯಲ್ಲಿ ವೃತ್ತಿಪರ ಶಿಕ್ಷಣದ ಬಗೆಗೆ ಕೆಲವಷ್ಟು ಮಾಹಿತಿಗಳನ್ನು ಒದಗಿಸಿರುವುದು ಸ್ತುತ್ಯರ್ಹ, ಜೊತೆಗೆ ಸಕಾಲಿಕವೂ ಹೌದು. ಈಗತಾನೇ ವಿವಿಧ ತರಗತಿಗಳ ವ್ಯಾಸಂಗವನ್ನು ಮುಗಿಸಿಕೊಂಡು ಹೊರಬೀಳುತ್ತಿರುವ ವಿದ್ಯಾರ್ಥಿಗಳಿಗೆ ಇದೊಂದು ಉಪಯುಕ್ತ ಮಾರ್ಗದರ್ಶನವನ್ನು ಒದಗಿಸುತ್ತದೆ. ಇಂದು ಯುವಜನರು ನಿರುದ್ಯೋಗಿಗಳಾಗದೆ ತಮ್ಮ ಕಾಲ ಮೇಲೆ ತಾವು ನಿಲ್ಲಬೇಕಾದರೆ ವೃತ್ತಿಪರ ಶಿಕ್ಷಣದ ಮೊರೆಹೋಗುವುದು ಸೂಕ್ತ.

ಈ ಲೇಖನವನ್ನು ಪ್ರಕಟಿಸಿದ ತಮಗೂ ಹಾಗೂ ತಮಗೆ ಈ ಬಗ್ಗೆ ಸಾಕಷ್ಟು ಮಾಹಿತಿಗಳನ್ನೊದಗಿಸಿದವರಿಗೂ ಅಭಿನಂದನೆಗಳು.

ಈ ಲೇಖನದ ಕೊನೆಯಲ್ಲಿ "೧೯೮೨ರ ಜೂನ್ ೨೨ರ 'ಸುಧಾ' ವಾರಪತ್ರಿಕೆಯಲ್ಲಿ ಬಹಳಷ್ಟು ಮಾಹಿತಿಗಳಿವೆ" ಎನ್ನುವಲ್ಲಿ "೧೯೮೨ರ ಜೂನ್ ೨೦ರ...." ಎಂದಿರಬೇಕಾಗಿತ್ತು.

—ಚಾವಲ್ಮನೆ ಸುರೇಶ್ ನಾಯಕ್

ನೂತನ ಬಿ.ಡಿ.ಓ.ಗಳು

ಜಿಲ್ಲೆಯ ಶೃಂಗೇರಿ ಮತ್ತು ನ.ರಾ.ಪುರಗಳ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನಾಗಿ ಕ್ರಮವಾಗಿ ಹೆಚ್. ಮಹೇಶ್ವರಪ್ಪ ಮತ್ತು ಖಾಜಾ ಮಸೂದ್ ಆಗಾರನ್ನು ಸರ್ಕಾರ ನೇಮಕ ಮಾಡಿರುವುದಾಗಿ ವರದಿಯಾಗಿದೆ.

ಬಂಡಿಗಡಿ ಸಹಕಾರ ಸಂಘದ ಪ್ರಕರಣ

(೧ನೇ ಪುಟದಿಂದ)

೧೯೮೧-೮೨ನೇ ಸಾಲಿನ ಆಡಿಟ್ ವರದಿಯು ೪-೪-೮೩ರಂದು ಈ ಕಛೇರಿಗೆ ತಲುಪಿದ್ದು ಪರಿಶೀಲಿಸಲಾಗಿ ಸಂಘದ ಕಾರ್ಯದರ್ಶಿ ಬಿ. ಮಂಜೇಗೌಡ ೩೪,೦೫೮-೬೦ ರೂ.ಗಳನ್ನು ದುರುಪಯೋಗ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ.

ಸಹಕಾರ ಸಂಘದ ಕಾಯ್ದೆ ೯೮ರ ಅನ್ವಯ ಸದರಿ ಕಾರ್ಯದರ್ಶಿಯವರ ವಿರುದ್ಧ ಏಪ್ರಿಲ್ ೫ರಂದು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ಆಜ್ಞೆ ಹೊರಡಿಸಲಾಗಿದೆ. ಈ ಮಧ್ಯೆ ಕಾರ್ಯದರ್ಶಿ ಅನಧಿಕೃತವಾಗಿ ಗೈರು ಹಾಜರಾಗಿದ್ದು ಸಹಕಾರ ಸಂಘದ ಲೆಖ್ಖ-ಪತ್ರಗಳನ್ನು ಸದರಿ ಕಾರ್ಯದರ್ಶಿಯವರು ನಾಶಪಡಿಸಬಹುದೆಂಬ ವದಂತಿ ಹಬ್ಬಿದುದರಿಂದ ಸಂಘಕ್ಕೆ ಇನ್ನೊಂದು ಬೀಗವನ್ನು ಹಾಕಲು ಸಹಕಾರ ವಿಸ್ತರಣಾಧಿಕಾರಿಗಳ ಮುಖಾಂತರ ಸಹಕಾರ ಸಂಘದ ಅಧ್ಯಕ್ಷರಿಗೆ ಸೂಚನೆ ನೀಡಿ ಏಪ್ರಿಲ್ ೨೦ರಂದು ಕ್ರಿಮಿನಲ್ ಮೊಕದ್ದಮೆ ಹೂಡಲು ಸಹಕಾರ ವಿಸ್ತರಣಾಧಿಕಾರಿಗಳಿಗೆ ಅಧಿಕಾರ ನೀಡಲಾಯಿತು.

ಏಪ್ರಿಲ್ ೨೯ ರಂದು ಸಂಘದ ಲೆಖ್ಖಪತ್ರಗಳನ್ನು ವಶಪಡಿಸಿಕೊಳ್ಳಲು ಸಹಕಾರ ಸಂಘದ ವಿಸ್ತರಣಾಧಿಕಾರಿ, ಕೇಂದ್ರ ಬ್ಯಾಂಕಿನ ಮೇಲ್ವಿಚಾರಕರು, ಸೇವಾ ಸಹಕಾರ ಸಂಘದ ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿಯ ಸದಸ್ಯರೆದುರು ಬೀಗ ತೆಗೆಸಿ ಸಂಘದ ಸಂಪೂರ್ಣ ಛಾರ್ಜನ್ನು ಬಿ. ಮಂಜೇಗೌಡರಿಂದ ಹಾಲ್ಮುತ್ತೂರು ಸಹಕಾರ ಸಂಘದ ಕಾರ್ಯದರ್ಶಿ ಗಣೇಶ್ ಭಟ್ಟರಿಗೆ ವಹಿಸಿಕೊಡಲಾಯಿತು.

ಈ ವ್ಯವಸ್ಥೆ ಹಂಗಾಮಿಯಾಗಿದ್ದು, ಬೇರೊಬ್ಬ ಕಾರ್ಯದರ್ಶಿಯನ್ನು ನೇಮಿಸಲು ಜಿಲ್ಲಾ ಕೇಂದ್ರ ಬ್ಯಾಂಕ್‌ನ ಕಾರ್ಯದರ್ಶಿಯವರಿಗೆ ಮೇ ೪ರಂದು ಪತ್ರ ಬರೆಯಲಾಗಿದೆ. ಹಣ ದುರುಪಯೋಗಪಡಿಸಿದ ಬಿ. ಮಂಜೇಗೌಡರನ್ನು ಅಮಾನತ್ತಿನಲ್ಲಿಟ್ಟು ಅವರ ಮೇಲೆ ಶಿಸ್ತಿನ ಕ್ರಮ ನಡೆಸಲು ವಿಚಾರಣಾಧಿಕಾರಿಯನ್ನು ನೇಮಕ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಕ್ರಿಮಿನಲ್ ಮೊಕದ್ದಮೆ ಹೂಡಲು ಸಹಕಾರ ವಿಸ್ತರಣಾಧಿಕಾರಿಗಳು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದು ಕೊಪ್ಪ ಪೋಲೀಸ್ ಠಾಣೆಯಲ್ಲಿ ಮೇ ೬ ರಂದು ದೂರು ದಾಖಲೆಯಾಗಿದೆ.

—ಮ.ರಾ. ದೀಪಕ್‌ರಾಜ್,
ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು.

ಶಿಕ್ಷಕರ ತರಬೇತಿಗೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ೧೯೮೩-೮೪ ನೇ ಸಾಲಿನಲ್ಲಿ ಟಿ.ಸಿ.ಹೆಚ್. ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿಗಳನ್ನು ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಕಛೇರಿ ವೇಳೆಯಲ್ಲಿ (೧೦-೩೦ ರಿಂದ ೫ ರ ವರೆಗೆ) ಪಡೆಯಬಹುದು. ಜೂನ್ ೧೦ ಅರ್ಜಿಯನ್ನು ಸಲ್ಲಿಸಲು ಕಡೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗೆ ಸಂಸ್ಥೆಯ ಅಧೀಕ್ಷಕರನ್ನು ಸಂಪರ್ಕಿಸಬಹುದು.

ರೈತಸಂಘದ ಪದಾಧಿಕಾರಿಗಳು

ಕಲ್ಲುಗುಡ್ಡೆ : ಇಲ್ಲಿನ ನಿಡಗಾಸಂದ ರೈತಸಂಘದ ೧೯೮೩-೮೪ ನೇ ಸಾಲಿನ ನೂತನ ಪದಾಧಿಕಾರಿಗಳಾಗಿ ಜೆ. ಕೆ.ಶಿವಶಂಕರ್ (ಅಧ್ಯಕ್ಷರು). ಬಿ. ಮಹಾಬಲರಾವ್ (ಉಪಾಧ್ಯಕ್ಷರು), ಎನ್. ಎಲ್. ಪುಂಡರೀಕ (ಕಾರ್ಯದರ್ಶಿ), ಬಿ. ಕೆ. ಲಕ್ಷ್ಮೀನಾರಾಯಣ (ಸಹಕಾರ್ಯದರ್ಶಿ) ಹಾಗೂ ಎಂ. ವಿ. ಪರಮೇಶ್ವರಭಟ್ಟ (ಖಜಾಂಚಿ) ಆಯ್ಕೆಯಾಗಿದ್ದಾರೆ.

ಹಿರೇಕೊಡಿಗೆಯಲ್ಲಿ ರೈತ ಸಮಾವೇಶ

ಹಿರೇಕೊಡಿಗೆ (ಕೊಪ್ಪ ತಾ॥) : ಇಲ್ಲಿ ಮೇ ೧೫ರಂದು ಗ್ರಾಮ ಮಟ್ಟದ ರೈತ ಸಮಾವೇಶ ನಡೆದು ರೈತಸಂಘವನ್ನು ಸ್ಥಾಪಿಸಲಾಯಿತು.

ಗ್ರಾಮ ಪ್ರವೇಶದ ಬಗ್ಗೆ ಅಧಿಕಾರಿಗಳಿಗೆ ತಿಳುವಳಿಕೆ ನೀಡುವ ಬೋರ್ಡನ್ನು ಅನಾವರಣ ಮಾಡಿದ ತೀರ್ಥಹಳ್ಳಿ ತಾ॥ ರೈತ ಮುಖಂಡ ಕಡಿದಾಳು ಶಾಮಣ್ಣ, ರೈತರ ನಿಯಮಗಳನ್ನು ಉಲ್ಲಂಘಿಸುವ ಅಧಿಕಾರಿಗಳು ರೈತರು ವಿಧಿಸುವ ದಂಡವನ್ನು ತೆರಬೇಕಾಗುತ್ತದೆಂದು ಎಚ್ಚರಿಸಿದರು. ರೈತರೆಲ್ಲ ಒಗ್ಗಟ್ಟಾಗಿ ರೈತ ಸಂಘ ಬಲಪಡಿಸಲು ತಾ॥ ರೈತಸಂಘದ ಅಧ್ಯಕ್ಷ ಮಳಿಗೆ ಚಂದ್ರಶೇಖರ್ ಕರೆ ಕೊಟ್ಟರು.

ಶಿವಪ್ಪನಾಯ್ಕರು ಅಧ್ಯಕ್ಷರಾಗಿಯೂ ಹೆಚ್.ಟಿ. ಕೃಷ್ಣಮೂರ್ತಿ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ

ಪಾದಯಾತ್ರೆ ಕಾಲದಲ್ಲಿ ಶಾಸಕರ ಗಮನಕ್ಕೆ ಬಂದ ಕೆಲ ಸಮಸ್ಯೆಗಳು

ಶೃಂಗೇರಿ: ಇದೇ ೧೧, ೧೨ ಮತ್ತು ೧೬, ೧೭ನೇ ತಾರೀಖುಗಳಲ್ಲಿ ಈ ತಾಲ್ಲೂಕಿನಲ್ಲಿ ಪಾದಯಾತ್ರೆ ಮಾಡಿದ ಶಾಸಕ ಗೋವಿಂದಗೌಡರು ಕಂಡ ಕೆಲವು ಪ್ರಮುಖ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಗೆ ಅವರು ಆಲೋಚಿಸಿರುವ ಪರಿಹಾರ ಮಾರ್ಗಗಳು ಇಲ್ಲಿವೆ:

೧) ಕೆರೆಮನೆ ಬಳಿ ೧೦-೧೫ ವರ್ಷಗಳ ಹಿಂದೆ ಗ್ರಾಮಸ್ಥರೇ ಕಟ್ಟಸಿದ್ದ, ಇಂದು ದುಃಸ್ಥಿತಿಯಲ್ಲಿರುವ ಕಿರು ಸೇತುವೆಗೆ ತಾ. ಅ.ಮಂಡಳಿಯಿಂದ ರಾ.ಗ್ರಾ.ಉ. ಯೋಜನೆಯಲ್ಲಿ ರಿಪೇರಿ ಮಾಡಿಸಲು ಸಲಹೆ.

೨) ಲೋಕೋಪಯೋಗಿ ಇಲಾಖೆ ಅಥವಾ ರಾ.ಗ್ರಾ.ನೀ.ಸ. ಯೋಜನೆಯಲ್ಲಿ ಮೆಣಸೆ ಸೇತುವೆ-ಉತ್ತಮೇಶ್ವರ ರಸ್ತೆಯ ಮಧ್ಯೆ ಬಂಡೆ ತೆಗೆಸಿ ೧ ಕಿ.ಮೀ. ರಸ್ತೆ ನಿರ್ಮಾಣ, (ಇದರಿಂದ ಉತ್ತಮೇಶ್ವರ-ಶೃಂಗೇರಿ ನಡುವೆ ನೇರ ಸಂಪರ್ಕ ಏರ್ಪಡುತ್ತದೆ.)

೩) ಬೋಳೂರು ಬಳಿ. ಮಳೆಯಿಂದ ತೀವ್ರ ಜಖಂ ಆಗಿರುವ ರಸ್ತೆಯನ್ನು ಕಡಿಮೆ ಖರ್ಚಿನಲ್ಲಿ ಹೇಗೆ ಉಪಯುಕ್ತವಾಗಿ ಮಾಡುವುದೆಂಬ ಬಗ್ಗೆ ೧ ತಿಂಗಳಲ್ಲಿ ವರದಿ ಕೊಡಲು ಊರವರು, ತಾ. ಅ. ಮಂ. ಮತ್ತು ಜನತಾ ಪಕ್ಷದ ಅಧ್ಯಕ್ಷರುಗಳು, ಹಾಗೂ ಸಹಾಯಕ ಇಂಜಿನಿಯರ್ ಅವರುಗಳಿಗೆ ಮನವಿ.

೪) ತೆಕ್ಕೂರಿನಲ್ಲಿ ಕುಡಿವ ನೀರಿಗೆ ತೀವ್ರ ಸಮಸ್ಯೆ.

೫) ಕಾಮಗಾರಿ ಪೂರ್ಣಗೊಂಡಿರುವ ವೈಕುಂಠಪುರ ನೀರಿನ ಯೋಜನೆಗೆ ವೋಲ್ಟೇಜ್ ಕಮ್ಮಿಯಾಗಿ ಪಂಪ್ ಕೆಟ್ಟು ನೀರಿನ ಕೊರತೆ.

೬) ಕಲ್ಕಟ್ಟೆಗೆ ಪ್ರಾಥಮಿಕ ಶಾಲೆ, ಬೀದಿ ದೀಪ, ಭಾಗ್ಯಜ್ಯೋತಿ.

೭) ಶೃಂಗೇರಿ ಪೇಟೆಯ ಸೌದೆ ಸಮಸ್ಯೆಗೆ ಅಧಿಕಾರಿಗಳೊಂದಿಗೆ ಸಮಾಲೋಚನೆ; ಪೂರೈಕೆ ಭರವಸ.

೮) ಹೆಗ್ತೂರಿನಲ್ಲಿ ೮ ಜನತಾ ಮನೆಗಳಿಗೆ ಬಹಳ ಕಾಲದಿಂದ ಅರ್ಜಿ.

೯) ನಂದಿನಿ ನದಿಗೆ ದೋಣಾರು ಸೇತುವೆ ಕೆಲಸ ಶೀಘ್ರವೇ ಆರಂಭಿಸುವ ಭರವಸೆ ಹಾಗೂ ಕಿಗ್ಗದ ಬಳಿ ಸೇತುವೆಯ ಮುರಿದ ಕೈಪಿಡಿ ದುರಸ್ತಿಗೆ ಲೋಕೋಪಯೋಗಿ ಇಲಾಖೆಗೆ ಸೂಚನೆ.

೧೦) ಕಿಗ್ಗದಲ್ಲಿ ಸೂಲಗಿತ್ತಿ, ಕೃಷಿ ಸಹಾಯಕ ಬರದಿರುವುದು, ಹಳ್ಳಿಗಳಿಗೆ ಭೇಟಿ ಕೊಡದಿರುವುದನ್ನು ಹಿರಿಯ ಅಧಿಕಾರಿಗಳ ಮೂಲಕ ಸರಿಪಡಿಸುವ ಭರವಸೆ.

೧೧) ಹೋಬಳಿ ರೆವಿನ್ಯೂ ಇನ್‌ಸ್ಪೆಕ್ಟರ್ ಶಿವರುದ್ರಪ್ಪ ಬಗ್ಗೆ ದೂರು ಬಂದಾಗ, ಬೈದು, ಹಿತವಚನ.

೧೨) ಸೋರುತ್ತಿರುವ ಸಂಕು ಅಣೆಕಟ್ಟಿನ ರಿಪೇರಿಗೆ ಲೋ. ಇಲಾಖೆಗೆ ತಾಕೀತು.

೧೩) ವಿದ್ಯಾರಣ್ಯಪುರದ ಕುಡಿವ ನೀರಿನ ಕೆಲಸ ರಾ.ಗ್ರಾ. ನೀರು ಸರಬರಾಜು ಯೋಜನೆಯಲ್ಲಿ ಕೂಡಲೇ ಕೆಲಸ ಆರಂಭಿಸುವ ಆಶ್ವಾಸನೆ.

೧೪) ನೆಮ್ಮಾರು ರಸ್ತೆಯಿಂದ ದುರ್ಗಾ ದೇವಸ್ಥಾನದ ಮೂಲಕ ರುದ್ರಪಾದ ದೇವಸ್ಥಾನದವರೆಗೆ ಜಲ್ಲಿ ರಸ್ತೆ.

೧೫) ನೆಮ್ಮಾರಿನಲ್ಲಿ ದಾದಿಯರಿಗೆ ನಿವಾಸ ಸೌಕರ್ಯ ಕೂಡ ಚೆನ್ನಾಗಿದ್ದು ಹುದ್ದೆ ಖಾಲಿ ಇದೆ.

೧೬) ಮತನಪ್ಪ ಗ್ರಾಮದ ದಿಂಡೋಡಿ ಕಿ.ಪ್ರಾ. ಶಾಲೆಯನ್ನು ಹಿ.ಪ್ರಾ. ಶಾಲೆಯ ದರ್ಜೆಗೇರಿಸುವುದು.

೧೭) ೮ ಮನೆಗಳಿದ್ದು, ಸ್ಥಳದ ಅನುಕೂಲವಿಲ್ಲದಿರುವ ಹೊಳೆಕೊಪ್ಪ ಹರಿಜನ ಕಾಲೊನಿಗೆ ನೀರೊದಗಿಸಲು ಸಮೀಪದ ಕೆರೆ ರಿಪೇರಿ ಅಥವ ಟ್ಯಾಂಕ್ ಕಟ್ಟಿ, ಹತ್ತಿರದ ಹಳ್ಳದಿಂದ ನೀರೆತ್ತುವುದು—ಇವುಗಳ ಪರಿಶೀಲನೆ.

೧೮) ಗಿಣಿಗಿಣಿಯಲ್ಲಿ ನೀರಿಲ್ಲದ ಬಾವಿಗೆ ಪ್ರಯೋಗಾರ್ಥವಾಗಿ ರಿಂಗ್ ಇಳಿಸಿ ಪ್ರಯತ್ನಿಸುವುದು ಮತ್ತು ಯಶಸ್ವಿಯಾದರೆ ಬೇರೆ ಕಡೆಗಳ ಬಾವಿಗಳಿಗೂ ಹಾಗೇ ಮಾಡುವ ವಿಚಾರ

೧೯) ಹೊಳೆಕೊಪ್ಪಕ್ಕೆ ಪಶುವೈದ್ಯಶಾಲೆ.

೨೦) ಹೊಸಕೆರೆ ಬಳಿ ಎಂಟು ಹರಿಜನರಿಗೆ ೨೦ ವರ್ಷದ ಹಿಂದೆ ಮಂಜೂರಾಗಿರುವ ೨ ಎಕ್ರೆ ಜಮೀನಿನಲ್ಲಿ ಸುಮಾರು ಮುಕ್ಕಾಲು ಎಕ್ರೆಯನ್ನು ಪಕ್ಕದ ಜಮೀನ್ದಾರ ಗೌಡರೊಬ್ಬರು ತಮ್ಮ ಜಾಗಕ್ಕೆ ಸೇರಿದ್ದೆಂದು ಒಳಗೆ ಹಾಕಿದ್ದು, ಪ್ರತಿಯೊಂದು ದಾಖಲಾತಿಯನ್ನೂ ಭದ್ರವಾಗಿಟ್ಟಿರುವ ಬಿಳಿಯನಿಗೆ ನ್ಯಾಯ ದೊರಕಿಸುವುದು. [ಈ ಒಂದು ಸಮಸ್ಯೆ ಬಗೆಹರಿಸುವುದು ತಮ್ಮಿಂದ ಸಾಧ್ಯವೆಂಬ ಆಶಾಭಾವನೆ ಗೋವಿಂದಗೌಡರಲ್ಲಿ ಕಾಣಲಿಲ್ಲ. —ಸಂ.]

ತೆಕ್ಕೂರು ಬಳಿ ಒಂದು ಬಾವಿಯಲ್ಲಿ ಯಾವಾಗಲೋ ಒಬ್ಬರು ಬಿದ್ದು ಸತ್ತಿದ್ದರಂತೆ. ಹೆಣ ತೆಗೆದೂ ಆಗಿದೆ. ಅದರಲ್ಲಿ ಈಗ ಒಳ್ಳೆಯ ನೀರಿದ್ದು, ಸುತ್ತಮುತ್ತ ತೀವ್ರ ನೀರಿನ ಅಭಾವವಿದ್ದರೂ ಆ ನೀರನ್ನು ಕುಡಿಯಲು ಊರವರಿಗೆ ಅಂಜಿಕೆ. ಅವರ ಅಜ್ಞಾನ, ಮೂಢನಂಬಿಕೆ ಕಂಡು ಆಶ್ಚರ್ಯಗೊಂಡ ಶಾಸಕರ ಸಲಹೆ: "ಕೂಡಲೇ ಬಾವಿಯನ್ನು ಸ್ವಚ್ಛಗೊಳಿಸಿ. ಅದರ ನೀರನ್ನು ಮೊದಲು ನಾನು ಕುಡಿಯುತ್ತೇನೆ. ಅನಂತರ ನೀವೆಲ್ಲ ಕುಡಿಯಿರಿ."